



# ನೀರುಕಾಯಿ ಮರ

■ ಚಿತ್ರಲೇಖನ:
ನಾಮದೇವ ಕಾಗದಗಾರ

ನನ್ನ ಶಾಲಾ ದಿನಗಳಲ್ಲಿ ಕಣ್ಣುಗಳು ಆ ರಸ್ತೆ ಬದಿಯ ಮರದ ಕಡೆಗೆ ನೋಡುತ್ತಿದ್ದವು. ಏಕೆಂದರೆ ಅಲ್ಲಿ 'ನೀರುಕಾಯಿ ಮರ'ದಲ್ಲಿ ಹೂವುಗಳ ಸಂಭ್ರಮ. ಆಕಾಶಕ್ಕೆ ಬೆಂಕಿ ಹತ್ತಿದಂತೆ ಕಾಣುತ್ತಿತ್ತು. ಆ ಹೂವುಗಳನ್ನು ನೋಡುವುದೇ ನನಗಾಗ ಒಂದು ರೋಮಾಂಚನ. ಈಗಲೂ ಆ ರೋಮಾಂಚನ ಭಾವ ಹಾಗೆಯೇ ಉಳಿದಿದೆ.

ಫೋಟೋ ಕ್ಲಿಕ್ಕಿಸಹೊರಟರೆ ಅದಾಗಲೇ ಒಂದು ಅಳಿಲು ಮರದ ಮೇಲಿನ ಹೂವುಗಳ ಮಧ್ಯ ತನ್ನ ಮೂತಿ ಹಾಕಿ ಹೊರ ತೆಗೆಯುತ್ತಿತ್ತು. ಈ ಮರದ ಸೊಬಗನ್ನು ಹತ್ತಿರದಿಂದ ನೋಡಬೇಕು. ಹೂವಿನ ಬಣ್ಣಗಳ ಸಂಭ್ರಮವನ್ನು ವರ್ಣಿಸುವುದು ಕಷ್ಟ. ಈ ಸುಂದರ ಮರಕ್ಕೆ ಹಳ್ಳಿ ಕಡೆ 'ನೀರುಕಾಯಿ ಮರ', 'ನೀರು ಬುಗ್ಗೆ ಮರ' ಎನ್ನುತ್ತಾರೆ.

ಪ್ರಪಂಚದ ಹೂ ಬಿಡುವ ಮರಗಳಲ್ಲೇ ಅತ್ಯಂತ ಸುಂದರ ಮರವಿದು. ಈ ಮರ ಆಫ್ರಿಕಾ ಮೂಲದ್ದು. ಶ್ರೀಲಂಕಾದಲ್ಲೂ ಇದೆ. ಭಾರತದಲ್ಲಿ ಬೆಂಗಳೂರು, ಹೈದರಾಬಾದ್, ಮುಂಬೈ ಮಹಾನಗರಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ರಾಜ್ಯದಲ್ಲಿ ಚಿಕ್ಕಮಗಳೂರಿನ ಪರಿಸರದಲ್ಲಿ ಹೆಚ್ಚಾಗಿದ್ದು, ಉತ್ತರ ಕರ್ನಾಟಕದಲ್ಲಿ ಅಲ್ಲಲ್ಲಿ ಮಾತ್ರ ಕಾಣಸಿಗುತ್ತದೆ.

ಬಿಗ್ನೋನಿಯೇಸೀ ಕುಟುಂಬಕ್ಕೆ ಸೇರಿದ ಈ ಮರವನ್ನು ಸಸ್ಯಶಾಸ್ತ್ರದಲ್ಲಿ ಸ್ಪಾತೋಡಿಯಾ ಕೆಂಪನುಲಾಟ್ ಎಂದು ಕರೆಯುತ್ತಾರೆ. ಇದರ ಮೂಲ ಹೆಸರು ಗ್ರೀಕ್ ಭಾಷೆಯಿಂದ ಬಂದಿದೆ. ಈ ಮರಕ್ಕೆ ಆಫ್ರಿಕನ್ ಟ್ಯುಲಿಪ್ ಟ್ರೀ, ಸ್ಕಾರ್ಲೆಟ್ ಬೆಲ್ ಟ್ರೀ, ಫೌಂಟೈನ್ ಟ್ರೀ ಎಂಬ ಹೆಸರುಗಳಿವೆ.

ಈ ಮರಗಳು ಸೆಪ್ಟೆಂಬರ್ ತಿಂಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ. ಹೂಗಳು ಕಡು ಕೇಸರಿ ಬಣ್ಣದಿಂದ ಕೂಡಿರುತ್ತವೆ. ಡಿಸೆಂಬರ್‌ವರೆಗೆ ಹೂವುಗಳಿರುತ್ತವೆ. ಒಂದು ಮರದಲ್ಲಿ ತುಂಬಾ ಹೂವುಗಳಿದ್ದರೆ, ಇನ್ನೊಂದು ಮರ ಇನ್ನೂ ಮೊಗ್ಗು ಬಿಡುತ್ತಿರುತ್ತದೆ.

ಈ ಮರ ಸುಮಾರು 30ರಿಂದ 50 ಅಡಿಗಳವರೆಗೆ ನೇರವಾಗಿ ಬೆಳೆಯಬಲ್ಲದು. ಇದನ್ನು ಸಾಮಾನ್ಯವಾಗಿ ಉದ್ಯಾನವನಗಳಲ್ಲಿ ಚಿಕ್ಕ-ದಾಗಿಯೂ ಬೆಳೆಸಲಾಗುತ್ತದೆ. ಕಡು ಕಂದುಬಣ್ಣದ ಕಾಂಡ ಹೊಂದಿದ್ದು, ಒಳಗಡೆ ಬಿಳಿ ಬಣ್ಣವಿರುತ್ತದೆ. ಈ ಮರವನ್ನು ಕುಸುರಿ ಕೆಲಸ ಮತ್ತು ಪೇಪರ್ ತಯಾರಿಸಲು ಉಪಯೋಗಿಸುತ್ತಾರೆ. ಎಲೆಗಳ ಮಧ್ಯದಿಂದ ಮೊಗ್ಗುಗಳು ಒಂದು ಗುಚ್ಛದಂತೆ ಹೊರಬರುತ್ತವೆ.. ಮೊಗ್ಗುಗಳು ಕೊಂಬಿನ ಆಕಾರದಲ್ಲಿರುತ್ತವೆ. ಹೂವುಗಳು ಅರಳಿದಾಗ ದೋಣಿಯಾಕಾರದಲ್ಲಿ ಕಾಣುತ್ತವೆ.

ಹೂವುಗಳ ಮಧ್ಯ ನೀರಿನಂತಹ ದ್ರವವಿರುತ್ತದೆ. ಹೂವುಗಳು ಅರಳುವ ಮುನ್ನ ಆ ದ್ರವವನ್ನು ಹೀರಿಕೊಳ್ಳುತ್ತವೆ. ಅಲ್ಲದೇ ಕೆಲವು ಜಾತಿಯ ಪಕ್ಷಿಗಳು, ಅಳಿಲುಗಳು ಈ ದ್ರವವನ್ನು ಕುಡಿದು ತಮ್ಮ ದಾಹವನ್ನು ತೀರಿಸಿಕೊಳ್ಳುತ್ತವೆ. ಹೂವುಗಳ ಮಧ್ಯ ನಾಲ್ಕು ಪರಾಗ ಕೇಸರಗಳಿರುತ್ತವೆ. ಅದರಲ್ಲಿ ಎರಡು ಚಿಕ್ಕದಾಗಿ ಇನ್ನೆರಡು ದೊಡ್ಡದಾಗಿರುತ್ತವೆ. ಅವು ಒಂದೊಕ್ಕೊಂದು ಮುತ್ತು ಕೊಡುತ್ತಿರುವಂತೆ ನೇರವಾಗಿ ನಿಂತಿರುತ್ತವೆ. ಇದರಿಂದ ಪರಾಗಸ್ಪರ್ಶಕ್ಕೂ ಸಹಾಯವಾಗುತ್ತದೆ. ಹೂಗಳು ಉದುರಿದ ಮೇಲೆ ಕೋಡಿನಾಕಾರದ ಬೀಜಗಳು ಉತ್ಪತ್ತಿಯಾಗುತ್ತವೆ. ಹೀಗೆ ಅರಳುವುದರಿಂದ ಇದರಿಂದ ಬೀಜ ಪ್ರಸರಣ ಹೆಚ್ಚಾಗುತ್ತದೆ.

ಪ್ರಕೃತಿಯು ನಮಗೊಂದು ಪಾಠಶಾಲೆ. ದಿನನಿತ್ಯ ನಮ್ಮ ಕಣ್ಣೆದುರಿಗೆ ಹಲವಾರು ಪಾಠಗಳು ನಡೆಯುತ್ತಿದ್ದರೂ ನಮ್ಮ ಗಮನ ಹೋಗುವುದು ಕೆಲವೊಮ್ಮೆ ಮಾತ್ರ. ಅವುಗಳನ್ನು ಕಂಡು ಸಂಭ್ರಮಿಸುವುದು ಒಂದು ಅನನ್ಯ ಅನುಭವ. ●